# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 30 (235)

ಸದಸ್ಯರ ಹೆಸರು : ಶ್ರೀ. ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು :ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 09.12.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಪ್ಪು ತಲೆ ಹುಳು, ನುಸಿ, ಸೊರಗು, ಬೆಂಕಿ, ಹರಳು ಉದುರುವ ರೋಗ ಸೇರಿದಂತೆ ನಾನಾ ರೋಗಗಳಿಗೆ ತುತ್ತಾಗಿದ್ದ ರೋಗಬಾಧಿತ ತೆಂಗಿನ ಬೆಳೆಯ ವೈಜ್ಞಾನಿಕ ಸಮೀಕ್ಷೆ ಅಪೂರ್ಣವಾಗಿರುವುದು ನಿಜವೇ; | ಹೌದು<br>Yes |
| ಆ) | ಹಾಗಿದ್ದಲ್ಲಿ, ರೋಗಬಾಧಿತ ತೆಂಗಿನ ಬೆಳೆಯ ಸಮೀಕ್ಷೆಯನ್ನು ವಾಸ್ತವವಾಗಿ ಯಾವ ಅವಧಿಯೊಳಗೆ ಪೂರ್ಣಗೊಳಿಸಬೇಕಿತ್ತು; ಸಮೀಕ್ಷೆಗೆ ನಿಯೋಜಿಸಿದ್ದ ನೌಕರರ ಸಂಖ್ಯೆ ಎಷ್ಟು; ಹಾಗೂ ಸಮೀಕ್ಷೆ ಅಪೂರ್ಣವಾಗಲು ಕಾರಣಗಳೇನು: (ವಿವರ ನೀಡುವುದು). | ಕಪ್ಪುತಲೆಹುಳು ಬಾಧಿತ ತೆಂಗಿನ ಬೆಳೆಯ ವೈಜ್ಞಾನಿಕ ಸಮೀಕ್ಷೆಯನ್ನು 2 ತಿಂಗಳು ಎಂದರೆ ಜುಲೈ-2025 ರ ಮಾಹೆಯ ಅವಧಿಯಲ್ಲಿ ಪೂರ್ಣಗೊಳಿಸಬೇಕಿತ್ತು.<br><br>ಈ ಕಾರ್ಯಕ್ರಮಕ್ಕೆ 1351 ಸ್ಥಳೀಯ ಖಾಸಗಿ ಸಿಬ್ಬಂದಿ ಎಂದರೆ Pest surveyor ಗಳನ್ನು ನಿಯೋಜಿಸಲಾಗಿರುತ್ತದೆ.<br><br>ಸಮೀಕ್ಷೆ ಅಪೂರ್ಣವಾಗಲು ಕಾರಣಗಳು ಈ ಕೆಳಗಿನಂತಿವೆ.<br>1. 2025-26 ನೇ ಸಾಲಿನ ಆಯವ್ಯಯ ಕಂಡಿಕೆ 55 ರಲ್ಲಿ "ತೆಂಗಿನ ಕಪ್ಪುತಲೆ ಹುಳು ಬಾಧೆಯ ಕುರಿತು ವೈಜ್ಞಾನಿಕ ಸಮೀಕ್ಷೆ ನಡೆಸಿ, ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು" ಎಂಬ ಘೋಷಣೆಯಂತೆ ಕಪ್ಪುತಲೆ ತಲೆಹುಳುವಿನ ಬಾಧಿತ ಪ್ರದೇಶದಲ್ಲಿ ಇಲಾಖೆ ಅಭಿವೃದ್ಧಿ ಪಡಿಸಿರುವ ಮೊಬೈಲ್ ಆಪ್ ಮೂಲಕ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ರೂ.25 ಲಕ್ಷಗಳನ್ನು ಈ ಉದ್ದೇಶಕ್ಕಾಗಿ ಒದಗಿಸಲಾಗಿದೆ. |

| | | |
|---|---|---|
| | | 2. ಈ ಉದ್ದೇಶಕ್ಕಾಗಿ Pest surveyor ಗಳನ್ನು ನಿಯೋಜಿಸಲಾಗಿದ್ದು ಪ್ರತಿ ತಾಕಿಗೆ ರೂ. 10 ರಂತೆ ಗೌರವಧನ ನೀಡಲಾಗುತ್ತದೆ.<br><br>3. ಬಿಳಿನೊಣದ ಬಾಧೆ ಹೆಚ್ಚಾಗಿದ್ದು, ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದಂತೆ ಹಾಗೂ ಸಂಬಂದಪಟ್ಟ ಸ್ಥಳೀಯ ಜನಪ್ರತಿನಿಧಿಗಳ ಕೋರಿಕೆಯಂತೆ ಕಪ್ಪುತಲೆ ಹುಳುವಿನ ಜೊತೆಗೆ ಬಿಳಿನೊಣದ ಸಮೀಕ್ಷೆ ಕೈಗೊಳ್ಳಬೇಕಾಗಿದೆ.<br><br>4. ಒಟ್ಟು ಕಪ್ಪುತಲೆ ಹುಳುವಿನಿಂದ 62044 ಹೆಕ್ಟೇರ್ ಪ್ರದೇಶವನ್ನು ಹಾಗೂ ಬಿಳಿನೊಣದಿಂದ 324259 ಹೆಕ್ಟೇರ್ ಪ್ರದೇಶ ಬಾಧಿತವಾಗಿರುವುದಾಗಿ ಅಂದಾಜಿಸಲಾಗಿದ್ದು, ಈ ಕುರಿತಾದ ಸಮೀಕ್ಷೆ ಕೈಗೊಳ್ಳಲು ರೂ. 2.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ. ಈ ಕುರಿತಾದ ಸಮೀಕ್ಷೆ ಕೈಗೊಳ್ಳಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಸಹಮತಿಗೆ ಕಳುಹಿಸಲಾಗಿದೆ.<br><br>5. ಜನವರಿಯಿಂದ ಮೇ ಮಾಹೆಯ ವರೆಗೂ ಹೆಚ್ಚಿನ ಉಷ್ಣಾಂಶದಿಂದ ಕಪ್ಪುತಲೆ ಹಾಗೂ ಬಿಳಿನೊಣದ ಹಾನಿ ಹೆಚ್ಚಾಗಲಿದ್ದು, ಈ ಅವಧಿಯಲ್ಲಿ ಸಮೀಕ್ಷೆ ಕೈಗೊಂಡಲ್ಲಿ ನಿಖರವಾದ ಮಾಹಿತಿ ಲಭ್ಯವಾಗಲಿದೆ.<br><br>ಈ ಕಾರಣಗಳಿಂದ ಸಮೀಕ್ಷೆ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. |

| | | |
|---|---|---|
| | | The scientific survey of coconut crops affected by the Black Headed Caterpillar was to be completed within two months, i.e., by July 2025.<br>For this programme, 1,351 local private Pest Surveyors had been engaged.<br><br>The following are the reasons for not completing the survey:<br>1. As per 2025–26 Budget Para-55 "Conducting a scientific survey on coconut Black Headed Caterpillar infestation and implementing plant protection measures" the survey in the affected areas has been conducted through a mobile application developed by the Department. Rs.25 lakhs has been sanctioned for this purpose.<br>2. For this purpose pest surveyors were engaged with an honorarium of Rs.10 per plot.<br>3. Due to the increased incidence of whitefly infestation, and based on the directions from the Hon'ble Chief Minister and request from public representatives to conduct a survey for whitefly infestation along with the Black Headed Caterpillar, it has become necessary to undertake a whitefly survey as well.<br>4. It is estimated that 62,044 hectares have been affected by the Black Headed Caterpillar and 324,259 hectares by Whitefly. In this regard, Rs. 2.00 crore is required to conduct survey. A proposal seeking approval for this has been submitted to the Finance Department.<br>5. From January to May, due to higher temperatures, the damage caused by both the Black Headed |

<table>
<tr><td></td><td></td><td>Caterpillar and Whitefly is likely to increase. So, conducting survey during this period will give more accurate data.<br>Therefore, the survey activities have been temporarily suspended for the above reasons.</td></tr>
<tr><td>ಇ)</td><td>ರಾಜ್ಯದಲ್ಲಿ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಾವುವು: ಇಲ್ಲಿ ಒಟ್ಟು ಎಷ್ಟು ತಾಲ್ಲೂಕುಗಳಿವೆ: ಈ ಪೈಕಿ ಎಷ್ಟು ತಾಲ್ಲೂಕುಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸಲಾಗಿದೆ; (ಜಿಲ್ಲಾವಾರು ಶೇಕಡವಾರು ಪ್ರಗತಿಯೊಂದಿಗೆ ಮಾಹಿತಿ ನೀಡುವುದು).</td><td>ರಾಜ್ಯದಲ್ಲಿ ತುಮಕೂರು, ಹಾಸನ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಬೆಂಗಳೂರು ದಕ್ಷಿಣ (ರಾಮನಗರ), ಚಿತ್ರದುರ್ಗ, ದಾವಣಗೆರೆ ಹಾಗೂ ಚಾಮರಾಜನಗರ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಾಗಿರುತ್ತವೆ.<br><br>ಈ ಜಿಲ್ಲೆಗಳಲ್ಲಿ ಒಟ್ಟು 58 ತಾಲ್ಲೂಕುಗಳಿವೆ. ಈ ಪೈಕಿ ಸಮೀಕ್ಷೆ ಪೂರ್ಣಗೊಂಡಿರುವ ತಾಲ್ಲೂಕುಗಳು ಇರುವುದಿಲ್ಲ.<br><br>ಜಿಲ್ಲಾವಾರು ಕಪ್ಪುತಲೆ ಹುಳುವಿನ ಸಮೀಕ್ಷೆಯ ಪ್ರಗತಿ ವಿವರ ಕೆಳಗಿನಂತಿದೆ:<br><br>
<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಶೇಕಡವಾಡು ಸಮೀಕ್ಷೆ ಪೂರ್ಣ ಗೊಂಡಿರುವ ವಿವರ</th></tr>
<tr><td>1</td><td>ಮೈಸೂರು</td><td>54.54</td></tr>
<tr><td>2</td><td>ತುಮಕೂರು</td><td>18.53</td></tr>
<tr><td>3</td><td>ಹಾಸನ</td><td>61.49</td></tr>
<tr><td>4</td><td>ಮಂಡ್ಯ</td><td>49.67</td></tr>
<tr><td>5</td><td>ಬೆಂಗಳೂರು ದಕ್ಷಿಣ</td><td>12.87</td></tr>
<tr><td>6</td><td>ಚಿಕ್ಕಮಗಳೂರು</td><td>21.00</td></tr>
<tr><td>7</td><td>ಚಿತ್ರದುರ್ಗ</td><td>18.73</td></tr>
<tr><td>8</td><td>ಚಾಮರಾಜನಗರ</td><td>51.66</td></tr>
<tr><td>9</td><td>ದಾವಣಗೆರೆ</td><td>37.40</td></tr>
</table>
<br>The major coconut growing districts in the state are Tumkur, Hassan, Chikkamagaluru, Mandya, Mysore, Bangalore South (Ramanagar),</td></tr>
</table>

| | | |
|---|---|---|
| | | Chitradurga, Davangere and Chamarajanagar.<br><br>There are 58 taluks comes under these districts.<br><br>The survey has not been completed in any of the taluks.<br><br>**District wise progress of the black headed caterpillar survey as given below:** |

| Sl.No. | District | Percentage survey completed details |
|---|---|---|
| 1 | Mysore | 54.54 |
| 2 | Tumkur | 18.53 |
| 3 | Hassan | 61.49 |
| 4 | Mandya | 49.67 |
| 5 | Bengaluru South | 12.87 |
| 6 | Chikkamagaluru | 21.00 |
| 7 | Chitradurga | 18.73 |
| 8 | Chamarajanagara | 51.66 |
| 9 | Davanagere | 37.40 |

| | | |
|---|---|---|
| ಈ) | ಸಮೀಕ್ಷೆಯಲ್ಲಿ ಗುರುತಿಸಿದಂತೆ ನಾನಾ ರೋಗಗಳಿಗೆ ತುತ್ತಾದ ಒಟ್ಟು ಮರಗಳ ಸಂಖ್ಯೆ ಎಷ್ಟು: ಇದರಲ್ಲಿ ಎಷ್ಟು ಮರಗಳು ಯಾವ ಯಾವ ತರಹದ ರೋಗಗಳಿಗೆ ತುತ್ತಾಗಿವೆ: (ಸಂಪೂರ್ಣ ವಿವರ ನೀಡುವುದು). | ಕಪ್ಪುತಲೆ ಹುಳುವಿನ ಸಮೀಕ್ಷೆಯನ್ನು ಕೈಗೊಂಡಿದ್ದು, ಈವರೆವಿಗೂ ಕೈಗೊಂಡ ಸಮೀಕ್ಷೆ ಅನುಸಾರ 38,77,356 ತೆಂಗಿನ ಮರಗಳು ತುತ್ತಾಗಿವೆ. ಸಮೀಕ್ಷೆ ಪೂರ್ಣಗೊಂಡಿರುವುದಿಲ್ಲ.<br><br>**ಕಪ್ಪುತಲೆ ಹುಳುವಿಗೆ ತುತ್ತಾದ ಮರಗಳ ಜಿಲ್ಲಾವಾರು ವಿವರ ಕೆಳಗಿನಂತಿದೆ.** |

| ಕ್ರ. ಸಂ. | ಜಿಲ್ಲೆ | ಕಪ್ಪುತಲೆ ಹುಳುವಿನಿಂದ ಬಾಧಿತ ಮರಗಳ ಸಂಖ್ಯೆ |
|---|---|---|
| 1 | ಮೈಸೂರು | 6,20,776 |
| 2 | ತುಮಕೂರು | 4,09,440 |

| | | |
|---|---|---|
| 3 | ಹಾಸನ | 12,88,179 |
| 4 | ಮಂಡ್ಯ | 5,14,156 |
| 5 | ಬೆಂಗಳೂರು ದಕ್ಷಿಣ | 96,900 |
| 6 | ಚಿಕ್ಕಮಗಳೂರು | 3,94,014 |
| 7 | ಚಿತ್ರದುರ್ಗ | 2,26,418 |
| 8 | ಚಾಮರಾಜನಗರ | 1,99,981 |
| 9 | ದಾವಣಗೆರೆ | 1,27,492 |
| | ಒಟ್ಟು | 38,77,356 |

A survey on the Black Headed Caterpillar infestation was undertaken, and till now there are 38,77,356 coconut trees are affected. However, the survey has not been completed.

**The district-wise details of the coconut trees affected by the Black Headed Caterpillar are as follows:**

| Sl.No. | District | Percentage survey completed details |
|---|---|---|
| 1 | Mysore | 6,20,776 |
| 2 | Tumkur | 4,09,440 |
| 3 | Hassan | 12,88,179 |
| 4 | Mandya | 5,14,156 |
| 5 | Bengaluru South | 96,900 |
| 6 | Chikkamagaluru | 3,94,014 |
| 7 | Chitradurga | 2,26,418 |
| 8 | Chamarajanagara | 1,99,981 |
| 9 | Davanagere | 1,27,492 |
| | Total | 38,77,356 |

ಉ) ರಾಜ್ಯದಲ್ಲಿ ತೆಂಗು ಕೃಷಿಯ ಅಂದಾಜು ವಿಸ್ತೀರ್ಣ ಹಾಗೂ ವಾರ್ಷಿಕ ಉತ್ಪಾದನೆ ಪ್ರಮಾಣ ಎಷ್ಟು? (ವಿವರ ನೀಡುವುದು)

ರಾಜ್ಯದಲ್ಲಿ ತೆಂಗು ಕೃಷಿಯ ಅಂದಾಜು ವಿಸ್ತೀರ್ಣ 6.00 ಲಕ್ಷ ಹೆಕ್ಟೇರ್ ಹಾಗೂ ವಾರ್ಷಿಕ ಉತ್ಪಾದನೆ 49090 ಲಕ್ಷ ತೆಂಗಿನ ಕಾಯಿಗಳು. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

| | | |
|---|---|---|
| | | The estimated area under coconut cultivation in the state is 6.00 lakh hectares and an annual production is 49,090 lakh coconuts. Details are provided in Annexure. |

**ಸಂಖ್ಯೆ: HORTI 511 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

## ಅನುಬಂಧ

## ತೆಂಗು ಬೆಳೆಯ ವಿಸ್ತೀರ್ಣ 2024-25 (3rd estimate)

| ಕ್ರ. ಸಂ. | ಜಿಲ್ಲೆಗಳು | ವಿಸ್ತೀರ್ಣ (ಹೆ.) | ಉತ್ಪನ್ನ (ಲಕ್ಷ ಸಂಖ್ಯೆ) |
|---|---|---|---|
| 1. | ಬೆಂಗಳೂರು (ಗ್ರಾ.) | 2511 | 226 |
| 2. | ದಾರವಾಡ | 114 | 8 |
| 3. | ಹಾಸನ | 116932 | 11576 |
| 4. | ಕಲಬುರ್ಗಿ | 24 | 2 |
| 5. | ಕೋಲಾರ | 932 | 102 |
| 6. | ಕೊಪ್ಪಳ | 204 | 15 |
| 7. | ಮಂಡ್ಯ | 74735 | 6726 |
| 8. | ಮೈಸೂರು | 20584 | 1647 |
| 9. | ಶಿವಮೊಗ್ಗ | 5642 | 719 |
| 10. | ತುಮಕೂರು | 179970 | 10252 |
| 11. | ಯಾದಗಿರಿ | 18 | 1 |
| 12. | ದಾವಣಗೆರೆ | 6816 | 501 |
| 13. | ಬೆಳಗಾವಿ | 155 | 11 |
| 14. | ದಕ್ಷಿಣ ಕನ್ನಡ | 27603 | 3312 |
| 15. | ಬಾಗಲಕೋಟೆ | 205 | 16 |
| 16. | ಬೆಂಗಳೂರು (ನಗರ) | 2068 | 184 |
| 17. | ಚಿಕ್ಕಬಳ್ಳಾಪುರ | 531 | 52 |
| 18. | ಚಿತ್ರದುರ್ಗ | 45570 | 4101 |
| 19. | ವಿಜಯಪುರ | 29 | 2 |
| 20. | ಬೆಂಗಳೂರು ದಕ್ಷಿಣ | 27526 | 220 |
| 21. | ಗದಗ | 222 | 22 |
| 22. | ಹಾವೇರಿ | 641 | 55 |
| 23. | ಚಿಕ್ಕಮಗಳೂರು | 49729 | 5457 |
| 24. | ಬಳ್ಳಾರಿ | 108 | 8 |
| 25. | ಉಡುಪಿ | 16252 | 1463 |
| 26. | ಚಾಮರಾಜನಗರ | 12012 | 1321 |
| 27. | ಉತ್ತರ ಕನ್ನಡ | 7683 | 922 |
| 28. | ಕೊಡಗು | 978 | 88 |
| 29. | ಬಿದರ್ | 30 | 2.13 |
| 30. | ವಿಜಯನಗರ | 830 | 67 |
| 31. | ರಾಯಚೂರು | 134 | 10 |
| | ಒಟ್ಟು | **600788** | **49090** |